ಕೊಂಡಿದ್ದಾರೆ. ಇದು ಯುಕ್ತವಾದುದು ಎಂದು ಇದನ್ನು ಅಧ್ಯಯನ ಮಾಡಿದವರಿಗೆಲ್ಲ ಗೊತ್ತಾಗುತ್ತದೆ.

**೩) ಪರಮಾನುಭವ ಬೋಧೆ** : ೬ ಸಂಧಿಗಳು, ೧೨೨ ಸೂತ್ರಗಳು, ಮತ್ತು ೯೮೫ ಸಾಂಗತ್ಯ ಪದ್ಯಗಳನ್ನೊಳಗೊಂಡ, ಅದ್ವೈತ ವೇದಾಂತವನ್ನು ಸರಳವಾಗಿ ನಿರೂಪಿಸುವ ಅಮೂಲ್ಯ ಕೃತಿ ಇದು. ನಿಜಗುಣರು ಈ ಕೃತಿಯ ಅಂತ್ಯದಲ್ಲಿ, ಇದು ವೇದ ವೇದಾಂತಗಳ ಗೌಪ್ಯವಾದ ಅರ್ಥ, ಪುರಾಣ ಸ್ಮೃತಿಗಳ ಸಾರ, ಪರಮಾರ್ಥದ ತಿರುಳು, ತತ್ತ್ವರಹಸ್ಯ ಎಂದಿರುವರು. ಸಾವಿರಾರು ವರ್ಷಗಳಿಂದ ಹರಿದುಬಂದ ಅದ್ವೈತ ವಿಚಾರಧಾರೆ ನಿಜಗುಣರಲ್ಲಿ ತುಸು ಭಿನ್ನತೆಯನ್ನು ಪಡೆದು ವೈಶಿಷ್ಟ್ಯಪೂರ್ಣವಾಗಿರುವುದನ್ನು ಈ ಗ್ರಂಥದಲ್ಲಿ ನೋಡಬಹುದು. ಅಧ್ಯಾತ್ಮದಂತಹ ನೀರಸ ಹಾಗೂ ಕ್ಲಿಷ್ಟ ವಿಷಯವನ್ನು, ಅನುಭವಿ ಅಧ್ಯಾಪಕನು ತನ್ನ ಶಿಷ್ಯರಿಗೆ ಬೋಧಿಸುವಂತೆ, ನಿಜಗುಣರು ಯಾಜ್ಞವಲ್ಕ್ಯ–ಮೈತ್ರೇಯಿಯರ ಸಂವಾದದ ಮೂಲಕ ನಿರೂಪಿಸಿರುವರು. ಇದಕ್ಕೆ ಮೂಲ ಆಕರ ಬೃಹದಾರಣ್ಯಕ ಉಪನಿಷತ್ತು. ಆದರೂ ಇದು ಆತ್ಮತತ್ತ್ವವನ್ನು ಉಪದೇಶಿಸುವ ಒಂದು ಸ್ವತಂತ್ರ ಕೃತಿಯಾಗಿದೆ ಎಂದು ಹೇಳಬಹುದು. ಆತ್ಮದರ್ಶನವನ್ನು ಹೇಳುವ ಕನ್ನಡದ ಉಪನಿಷತ್ತು ಇದು.

**೪) ಪರಮಾರ್ಥಗೀತೆ:** ಗುರು–ಶಿಷ್ಯ ಸಂವಾದ ರೂಪದಲ್ಲಿರುವ ಈ ಕೃತಿಯಲ್ಲಿ ಹನ್ನೊಂದು ಗತಿಗಳಿವೆ. ಒಂದೊಂದು ಗತಿಯಲ್ಲೂ ಎಂಟೆಂಟು ಪಾದಗಳ ಹನ್ನೊಂದು ರಗಳೆಗಳಿವೆ. "ಯೋಗವಾಸಿಷ್ಠದಲ್ಲಿ ಶ್ರೀಗುರುವು ತನ್ನ ಶಿಷ್ಯನಿಗೆ ಪ್ರೀತಿಯಿಂದ ಮುಕ್ತಿಮಾರ್ಗವನ್ನು ತಿಳಿಸಿದನು; ಅದನ್ನೇ ನಾನು 'ಶಂಭುಲಿಂಗನ ಒಲವಿಂದ' ಕನ್ನಡದಲ್ಲಿ ಹೇಳುತ್ತಿರುವೆ" ಎಂದು ನಿಜಗುಣರೇ ತಮ್ಮ ಕೃತಿಯ ಮೊದಲ ಪದ್ಯದಲ್ಲಿ ಹೇಳಿದ್ದಾರೆ. ಇದು ವಸಿಷ್ಠ – ಶ್ರೀರಾಮಚಂದ್ರರ (ಗುರು–ಶಿಷ್ಯರ) ಸಂವಾದ ರೂಪದಲ್ಲಿದೆ. ಈ ಕೃತಿಯ ಮೊದಲು ಆರು ಗತಿಗಳಲ್ಲಿ 'ಸಾಧನೆಯ ಗುರಿ' ಯನ್ನು ಹೇಳಿ, ಮುಂದಿನ ನಾಲ್ಕು ಗತಿಗಳಲ್ಲಿ 'ಸಾಧನೆಯ ಮಾರ್ಗ' ವಿಧಾನವನ್ನು ಹೇಳಲಾಗಿದೆ. ಕೊನೆಯ ಗತಿಯಲ್ಲಿ ಜೀವನ್ಮುಕ್ತನ ಲಕ್ಷಣವನ್ನು ತಿಳಿಸಿದೆ.

**೫) ಅನುಭವಸಾರ:** ಸಕಲ ವೇದಾಂತದ ಸಾರವನ್ನೇ ಸಾಧಕರಿಗೆ ತಿಳಿಯುವಂತೆ, 'ಅನುಭವಸಾರ'ವಾಗಿ ಹೇಳುತ್ತಿರುವುದಾಗಿ ನಿಜಗುಣ ಶಿವಯೋಗಿಗಳು ಈ ಕೃತಿಯಲ್ಲಿ ಹೇಳಿಕೊಳ್ಳುತ್ತಾರೆ. ಮೊದಲನೆಯ ಸಂಧಿಯಲ್ಲಿ ಶಿಷ್ಯನ ಪ್ರಶ್ನೆಗೆ ಗುರುವು ಪರಿಹಾರವನ್ನು ತಿಳಿಯಪಡಿಸುವನು. ಎರಡನೆಯ ಸಂಧಿಯಲ್ಲಿ ಈಶ್ವರ – ಜೀವರ ಸಂಬಂಧವನ್ನೂ, ಮೂರನೆಯ ಸಂಧಿಯಲ್ಲಿ ಏಕಾತ್ಮವಾದವನ್ನೂ, ನಾಲ್ಕನೆಯ ಸಂಧಿಯಲ್ಲಿ ಅನಾತ್ಮತ್ವ ನಿರಾಕರಣವನ್ನೂ, ಐದನೆಯ ಸಂಧಿಯಲ್ಲಿ ಚಿತ್–ಅಚಿತ್ ವಿವೇಕವನ್ನೂ, ಏಳನೆಯದರಲ್ಲಿ ಮುಕ್ತಿಗೆ ಜ್ಞಾನವೇ ಸಾಧನ, ಕರ್ಮವಲ್ಲವೆಂಬುದನ್ನೂ ಹಾಗೂ ಜ್ಞಾನಿಯ ಲಕ್ಷಣಗಳನ್ನೂ, ಎಂಟನೆಯ ಸಂಧಿಯಲ್ಲಿ ಗುರುವಿನ ಎಚ್ಚರಿಕೆಯ ನುಡಿಗಳನ್ನೂ ಹೇಳಲಾಗಿದೆ. ಕಠಿಣವಾದ ವೇದಾಂತ ವಿಷಯಗಳನ್ನು, ಅತ್ಯಂತ ಸರಳವಾದ ದೃಷ್ಟಾಂತಗಳ ಮೂಲಕ, ತ್ರಿಪದಿಗಳಲ್ಲಿ ವಿವರಿಸಿರುವುದು ಈ ಕೃತಿಯ ವೈಶಿಷ್ಟ್ಯ.

**೬) ಪರಮಾರ್ಥ ಪ್ರಕಾಶಿಕೆ :** ಈ ಕೃತಿಯು ಗದ್ಯಶಾಸ್ತ್ರವಾಗಿದ್ದು, ಚೆನ್ನಸದಾಶಿವಯೋಗಿಯು ಸಂಸ್ಕೃತದಲ್ಲಿ ರಚಿಸಿರುವ 'ಶಿವಯೋಗ ಪ್ರದೀಪಿಕೆ'ಯ ಕನ್ನಡ ರೂಪಾಂತರವಾಗಿದೆ. ಇದರಲ್ಲಿ ಯೋಗಶಾಸ್ತ್ರವನ್ನು ಗುರು–ಶಿಷ್ಯರ ಸಂವಾದ ರೂಪದಲ್ಲಿ ಸರಳವಾಗಿ ತಿಳಿಯಪಡಿಸಲಾಗಿದೆ.

**೭) ವಿವೇಕ ಚಿಂತಾಮಣಿ :** ಇದು ಕೂಡ ಗದ್ಯಶಾಸ್ತ್ರ. ಇಲ್ಲಿ ಮುಖ್ಯವಾಗಿ ಅಧ್ಯಾತ್ಮ ಹಾಗೂ ತತ್ತ್ವವಿಚಾರಗಳಿಗೆ ಹೆಚ್ಚಿನ ಒತ್ತು ಕೊಡಲಾಗಿದೆ. ಅನೇಕ ವಿಚಾರಗಳು ಪ್ರಸ್ತಾಪಗೊಂಡಿರುವುದರಿಂದ, ಇದೊಂದು 'ವಿಶ್ವಕೋಶ'ದ ರೀತಿಯಲ್ಲಿದೆ. ನಿಘಂಟುಕಾರರು ಕೊಡುವ ರೀತಿಯಲ್ಲಿ, ಸಂಕ್ಷಿಪ್ತವಾಗಿ ಒಂದೊಂದು ವಿಷಯದ ಬಗ್ಗೆಯೂ ವಿವರಣೆ ನೀಡಲಾಗಿದೆ. ವಿಷಯದ ಸಾರವನ್ನು ಒಪ್ಪಗೆಡದಂತೆ ತೀರಾ ಹಿಗ್ಗಿಸದೆ, ಹಾಗೆಯೇ ಕುಗ್ಗಿಸದೆ, ಹಿತಮಿತವಾಗಿ ಹೇಳುವ ಕಲೆ ನಿಜಗುಣರಿಗೆ ಒಲಿದಿದೆ. ಹಾಗೆಂದೇ ಅವರಿಗೆ, ಈ ಕೃತಿಯಲ್ಲಿ ಏಳುನೂರಕ್ಕೂ ಮೀರಿದ ಸಂಗತಿಗಳನ್ನು ಪ್ರಸ್ತಾಪಿಸಲು ಸಾಧ್ಯವಾಗಿದೆ.

**೮) ಸ್ವರೂಪಸಿದ್ಧಿ ಟೀಕೆ –** ಪರಂಜ್ಯೋತಿಯವರ 'ಅನುಭವ ಮುಕುರ' ಕೃತಿಗೆ, ನಿಜಗುಣರು 'ಸ್ವರೂಪಸಿದ್ಧಿ' ಎನ್ನುವ ಟೀಕೆಯನ್ನು ಬರೆದಿರುವರು. ಶಂಕರಾಚಾರ್ಯರು ಬೋಧಿಸಿದ 'ತತ್ತ್ವೋಪದೇಶ' ಎಂಬ ಕೃತಿಯ ಸಾರವನ್ನೇ ಇದರಲ್ಲಿ ಹೇಳಿರುವಂತಿದೆ. ಈ ತತ್ತ್ವೋಪದೇಶವು ದಕ್ಷಿಣಾಮೂರ್ತಿ ಮತ್ತು ಕುಮಾರಸ್ವಾಮಿ – ಇವರಿಬ್ಬರ ಸಂವಾದದ ರೂಪದಲ್ಲಿದೆ.

ನೂರಾರು ಸೂತ್ರಪ್ರಾಯವಾದ ನುಡಿಗಳು, ಅರಿವಿನ ಕಿರುನುಡಿಗಳು ನಿಜಗುಣರ ಕೃತಿಯಲ್ಲಿ ಕಾಣಸಿಗುತ್ತವೆ. ಮಾತು ಅವರಿಗೆ ಜ್ಯೋತಿ, ಪರಮಜ್ಯೋತಿಯ ಸ್ವರೂಪ. ಹಾಗಾಗಿ ತತ್ತ್ವಜ್ಞಾನಿಯ ನಿಷ್ಪಕ್ಷಪಾತ ವೃತ್ತಿಯೂ, ಮತವರ್ಗದೊಡನೆ ಹೊಂದಿಸಿಕೊಂಡು ಹೋಗುವ ಜಾಣ್ಮೆಯೂ ನಿಜಗುಣರಿಗೆ ಸಿದ್ಧಿಸಿದೆ. ಹೀಗೆ ಕನ್ನಡನಾಡಿನ ತತ್ತ್ವಪ್ರತಿಪಾದಕರಲ್ಲಿ ನಿಜಗುಣರ ಸ್ಥಾನವು ಮಹತ್ವದ್ದು. ●

**ಆಧಾರಗ್ರಂಥಗಳು**


**೧) ಕನ್ನಡ ಸಾಹಿತ್ಯ ಚರಿತ್ರೆ**
**– *ರಂ.ಶ್ರೀ.ಮುಗಳಿ***

**೨) ಕನ್ನಡ ಸಾಹಿತ್ಯ ಚರಿತ್ರೆ**
**– *ತ.ಸು. ಶಾಮರಾಯರು***

**೩) ನಿಜಗುಣರ ಸಮಗ್ರ ಸಾಹಿತ್ಯ – ಭಾಗ – ೧**
**ಭಾಗ – ೨**
**ಸಂಪಾದಕರು: *ಎನ್. ವಿದ್ಯಾಶಂಕರ್***






# ನಿಜಗುಣರ ಕೈವಲ್ಯಪದ್ಧತಿ - ಒಂದು ಸ್ಥೂಲ ಪರಿಚಯ

**ಪಾರ್ವತಮ್ಮ ಚಂದ್ರಣ್ಣ**

**ಶ್ರೀ ನಿಜಗುಣ ಶಿವಯೋಗಿಗಳ ಗ್ರಂಥಗಳಲ್ಲಿ, 'ಕೈವಲ್ಯಪದ್ಧತಿ'ಯು ವಿಶಿಷ್ಟವಾದುದು. ಕನ್ನಡ ಗೀತಸಾಹಿತ್ಯದಲ್ಲಿ ಇದಕ್ಕೆ ಮೇರುಸ್ಥಾನವಿದೆ. ಇದರ ಸೋದಾಹರಣ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕಿ ವೀರಶೈವ ಸಿದ್ಧಾಂತದಲ್ಲಿ ನುರಿತವರು. ಇವರು ಅದರ ಬಗ್ಗೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಮೈಸೂರು ನಿವಾಸಿಯಾದ ಇವರ ಲೇಖನ ಈ ಪತ್ರಿಕೆಯಲ್ಲಿಯೂ ಪ್ರಕಟವಾಗಿದೆ.**

ಕರ್ನಾಟಕದ ಆಧ್ಯಾತ್ಮಿಕ ಪರಂಪರೆಯ ಮಹಾನುಭಾವಿಗಳ ಸಾಲಿನಲ್ಲಿ ಶ್ರೀಮನ್ನಿಜಗುಣ ಶಿವಯೋಗಿಗಳು ಪ್ರಮುಖರೆನಿಸಿದ್ದಾರೆ. ಸಕಲವಿದ್ಯಾಪಾರಂಗತರಾಗಿದ್ದ ಇವರು ಉನ್ನತ ತಪೋನಿಷ್ಠರಾಗಿ ಬಾಳಿದರು. ಶಂಭುಲಿಂಗನ ಕರುಣೆಯ ಶಿಶುವಾಗಿ ತಾವು ಪಡೆದ ಶಿವಾನಂದದ ಅನುಭೂತಿಯನ್ನು ತಮ್ಮ ಸ್ವಾನುಭಾವದ ನುಡಿಗಳಲ್ಲಿ ನಿರೂಪಿಸಿ, ಎಂಟು ಗ್ರಂಥಗಳನ್ನು ರಚಿಸಿದರು. ಈ ಗ್ರಂಥಗಳಲ್ಲಿರುವ ವಿಚಾರಗಳ ಮೌಲ್ಯ ಇಡೀ ಆಧ್ಯಾತ್ಮಿಕ ಸಾಹಿತ್ಯ ಪ್ರಪಂಚವನ್ನೇ ಶ್ರೀಮಂತಗೊಳಿಸಿದೆ ಎಂದು ಹೇಳಬಹುದು.

ಅವುಗಳಲ್ಲಿ ವೈಶಿಷ್ಟ್ಯಪೂರ್ಣವಾದ ಗ್ರಂಥ **ಕೈವಲ್ಯಪದ್ಧತಿ.** ಇದು ನಿಜಗುಣರ ಸ್ವತಂತ್ರ ಕೃತಿ. ತಮ್ಮ ಸ್ವಾನುಭವವನ್ನೇ ಸ್ವರಚಿತ ಹಾಡುಗಳ ಮೂಲಕ ಇದರಲ್ಲಿ ಹರಿಸಿದ್ದಾರೆ. ತತ್ತ್ವಪದಗಳ ಸಂಗ್ರಹವಾದ ಈ ಗ್ರಂಥದಲ್ಲಿ ಒಟ್ಟು ೧೭೪ ಹಾಡುಗಳಿವೆ. ವಿಷಯವನ್ನು ಇಲ್ಲಿ ಐದು ಸ್ಥಲಗಳಾಗಿ ವಿಂಗಡಿಸಲಾಗಿದೆ. ಆಯಾ ಸ್ಥಲಕ್ಕೆ ತಕ್ಕ ಹಾಗೆ ಪದ್ಯಗಳು ಬರುತ್ತವೆ. ಲೌಕಿಕ ಜೀವನದ ಪರಿಮಿತಿಯೊಳಗೆ ನೊಂದು ಬೆಂದ ಜೀವಿಯು ತನ್ನ ಕಷ್ಟಸಂಕಟಗಳನ್ನು ದಾಟಿ, ಶಾಶ್ವತ ಸುಖ ನೆಮ್ಮದಿಯನ್ನು ಪಡೆಯಲು ಹಂಬಲಿಸುತ್ತಾನೆ. ಅಂತಹ ಸಾಧಕ ಜೀವಿಯು ಹಂತಹಂತವಾಗಿ ಔನ್ನತ್ಯ ಪಡೆದು ಮೇಲಕ್ಕೇರಿ ಪರಮಾತ್ಮನ ಸಾನ್ನಿಧ್ಯ, ಸಮರಸ ಹೊಂದುವವರೆಗೂ ಬರುವ ವಿಚಾರಗಳ ಪ್ರತಿಪಾದನೆ ಈ ಹಾಡುಗಳಲ್ಲಿವೆ. ಸ್ಥಳಕಟ್ಟಿಗೆ ಸರಿಯಾಗಿ ಹಾಡುಗಳನ್ನು ಜೋಡಿಸಿದ್ದಾರೆ. ಶಿವಕಾರುಣ್ಯಸ್ಥಲದಲ್ಲಿ ೨೮ ಪದ್ಯಗಳು, ಜೀವಸಂಬೋಧನಾ ಸ್ಥಲದಲ್ಲಿ ೨೨ ಹಾಡುಗಳು, ನೀತಿಕ್ರಿಯಾಚರ್ಯದಲ್ಲಿ ೨೬, ಯೋಗ ಪ್ರತಿಪಾದನಾಸ್ಥಲದಲ್ಲಿ ೩೬ ಮತ್ತು ಐದನೆಯದಾದ ಜ್ಞಾನ ಪ್ರತಿಪಾದನಾಸ್ಥಲದಲ್ಲಿ ೫೬ ಹಾಡುಗಳು ಬರುತ್ತವೆ. ಬಹಳ ಸರಳವಾದ ಕನ್ನಡದಲ್ಲಿ ರಚಿಸಲ್ಪಟ್ಟಿರುವ ಈ ಪದ್ಯಗಳು ನೇರವಾಗಿ ಓದುಗರ ಹೃದಯದಾಳವನ್ನು ಮುಟ್ಟುವಂತಿವೆ. ಆಯಾ ಕಾಲಕ್ಕೆ ತಕ್ಕಂತೆ ಹೊರಹೊಮ್ಮಿದ ನಿಜಗುಣರ ಸ್ವಾನುಭಾವದ ನುಡಿಗಳಾದ ಈ ತತ್ತ್ವಪದಗಳು ಸಾಮಾನ್ಯರಿಂದ ಹಿಡಿದು ಜ್ಞಾನಿಗಳವರೆಗೆ ಎಲ್ಲರ ಮನಸ್ಸಿಗೂ ಹಿಡಿಸುತ್ತವೆ. ಈ ಗ್ರಂಥದ ಕೊನೆಯಲ್ಲಿ ನಿಜಗುಣರೇ ಹೇಳಿರುವ ಮಾತಿನಂತೆ, **'ಆಬಾಲವೃದ್ಧರಿಗಾಯಾಸವಿನಿತಿಲ್ಲದಂತೆ, ಸಮ್ಯಕ್ ಜ್ಞಾನಿಗಳೊಡಂಬಡುವಂತೆ'** ಇಲ್ಲಿರುವ ಪದಗಳ ವಿಷಯ ವಿವೇಚನೆಯು ನಿರೂಪಿತವಾಗಿದೆ. ಆಸಕ್ತಿಯಿಂದ ಓದಿದಾಗ ಸಣ್ಣ ಮಕ್ಕಳಿಂದ ಹಿಡಿದು, ಮುದುಕರವರೆಗೂ ಎಲ್ಲರಿಗೂ ಸರಳವಾಗಿ ಅರ್ಥವಾಗುವ ಈ ಹಾಡುಗಬ್ಬಗಳಲ್ಲಿನ ಆಧ್ಯಾತ್ಮಿಕ ವಿಷಯಗಳ ನಿರೂಪಣೆಯು ಎಂತಹ ಸುಜ್ಞಾನಿಯಾದವನೂ ಮೆಚ್ಚಿ ತಲೆದೂಗುವಂತಿದೆ.

ಅನುಭಾವಿಗಳಾದ ಗರಗದ ಮಡಿವಾಳ ಶಿವಯೋಗಿಗಳ ಮುಂದೆ ಒಬ್ಬನು ನಿಜಗುಣರ ಒಂದು ಕೃತಿಯನ್ನು ಹಾಡಿದನಂತೆ. ಅದನ್ನು ಕೇಳಿ ಆನಂದತುಂದಿಲರಾದ ಗುರುಗಳು, "ಈ ಕೃತಿ ಯಾರದ್ದಪ್ಪಾ?" ಎಂದು ಕೇಳಿದರಂತೆ. ಬಹುಶಃ ಆಗ್ಗೆ ನಿಜಗುಣರ ಸಾಹಿತ್ಯ ಇನ್ನೂ ಹೆಚ್ಚು ಪ್ರಚಲಿತವಾಗಿರಲಿಕ್ಕಿಲ್ಲ. ಅದು ನಿಜಗುಣ

ಶಿವಯೋಗಿಗಳ ಕೃತಿ ಎಂಬುದನ್ನು ತಿಳಿದು ಅತ್ಯಂತ ಆನಂದ ಆಶ್ಚರ್ಯಗಳಿಂದ, "ಅಪ್ಪಾ ನಿಜಗುಣಾ, ನೀನು ಅಚ್ಚ ಕನ್ನಡದಲ್ಲಿ ಇಂತಹ ಘನವಾದ ತತ್ತ್ವವನ್ನು ಇಷ್ಟು ಸರಳವಾಗಿ ರಚಿಸಿದ್ದು ನನಗೆ ಮೊದಲೇ ತಿಳಿದಿದ್ದರೆ, ನಾನು ಅಷ್ಟೊಂದು ಕಷ್ಟಪಟ್ಟುಕೊಂಡು ಕಾಶಿಗೆ ಹೋಗಿ ಸಂಸ್ಕೃತವನ್ನೇ ಕಲಿಯುತ್ತಿರಲಿಲ್ಲ" ಎಂದರಂತೆ! ಸಮ್ಯಕ್ ಜ್ಞಾನಿಗಳಾದ ಅನುಭವಿಗಳು ಮೆಚ್ಚಿ ತಲೆದೂಗುವಂತಹ ಪಾಂಡಿತ್ಯಪೂರ್ಣವಾದ ತಾತ್ತ್ವಿಕ ಮೇಲ್ಮೆಯು ಕೈವಲ್ಯಪದ್ಧತಿಯ ಹಾಡುಗಬ್ಬಗಳಲ್ಲಿ ಅಡಗಿದೆ. ಇಲ್ಲಿ ಪ್ರತಿಯೊಂದು ಹಾಡಿಗೂ, ಅದರ ಭಾವಕ್ಕೆ ಹೊಂದುವಂತಹ ರಾಗಗಳನ್ನು ಹೊಂದಿಸಲಾಗಿದೆ. ಹೀಗಾಗಿ ರಾಗಬದ್ಧವಾದ ಈ ಗೀತೆಗಳ ಸಂಗ್ರಹ ಸಂಗೀತಗಾರರಿಗೂ ಹೆಚ್ಚು ಉಪಯುಕ್ತವೆನಿಸಿದೆ.

ನಿಜಗುಣ ಶಿವಯೋಗಿಗಳ ಕೃತಿಗಳಲ್ಲೆಲ್ಲ, 'ಕೈವಲ್ಯಪದ್ಧತಿ' ಒಂದು ವೈಶಿಷ್ಟ್ಯಪೂರ್ಣವಾದ ಗ್ರಂಥ. ಮುಮುಕ್ಷುವಾದವನು ಈ ಗ್ರಂಥದ ವಿಚಾರಗಳನ್ನನುಸರಿಸಿ ಮುನ್ನಡೆದರೆ ಸಾಧನೆಯ ಸೋಪಾನಗಳನ್ನೇರುತ್ತಾ ಮೋಕ್ಷ ಪದವಿಯ ಉತ್ತುಂಗ ಶೃಂಗವನ್ನೇರಿ, ಕೊನೆಗೆ ಶಂಭುಲಿಂಗನೊಡನೆ ಸಮರಸವಾಗಿ ಸ್ವಯಂ ಜ್ಯೋತಿಸ್ವರೂಪನಾಗುತ್ತಾನೆ. ಅಂತಹ ವಿಪುಲವಾದ ಜ್ಞಾನ, ಭಕ್ತಿ, ವೈರಾಗ್ಯಗಳ ಸಂಪತ್ತು ಇಲ್ಲಿ ತುಂಬಿದೆ. ಕೈವಲ್ಯಪದ್ಧತಿಯಲ್ಲಿ ಬರುವ ಒಂದೊಂದೇ ಸ್ಥಲವನ್ನು ಸ್ವಲ್ಪ ವಿವರವಾಗಿ ನೋಡುತ್ತಾ ಹೋದರೆ ನಿಜಗುಣರ ದಿವ್ಯ ನಿಲುವಿನ ಸ್ಥೂಲದರ್ಶನ ಮಾಡಿಕೊಳ್ಳಬಹುದು.

**ಶಿವಕಾರುಣ್ಯ ಸ್ಥಲ:** ಮೊದಲನೆಯದು ಶಿವಕಾರುಣ್ಯಸ್ಥಲ. ಇಲ್ಲಿ ಶಿವನ ಕರುಣೆಗಾಗಿ ಹಾರೈಸಿ ಹಂಬಲಿಸುತ್ತಾನೆ, ಜೀವಿ. ಪ್ರಾಪಂಚಿಕ ಸುಖ ದುಃಖ ನೋವು ಸಂಕಟಗಳಿಂದ ಬೆಂದು ಬಳಲಿದ ಜೀವಕ್ಕೆ, ಇದೆಲ್ಲವನ್ನೂ ಮೀರಿದ ಶಾಂತಿ ಸಮಾಧಾನಗಳನ್ನು ಪಡೆಯುವ ಬಯಕೆ ಉಂಟಾಗುತ್ತದೆ. ಲೌಕಿಕದ ಪರಿಮಿತಿಯನ್ನು ಹರಿದೊಗೆದ ಸಾಧಕನು ಪರಮಾತ್ಮನ ಕೃಪಾವಲಯದಲ್ಲಿ ಹೊಗುವ ಪ್ರಯತ್ನ ಮಾಡುತ್ತಾನೆ. ಸಾಧಕ ಜೀವನದ ಪ್ರಾರಂಭಾವಸ್ಥೆಯ ಆಂತರಿಕ ತಳಮಳ ಶುರುವಾಗುತ್ತದೆ. ಜಗತ್ತಿನಲ್ಲಿ ಮಹಾತ್ಮರೆನಿಸಿಕೊಂಡಿರುವ ಎಲ್ಲರಲ್ಲೂ ಪ್ರಾರಂಭಿಕ ಸಾಧಕಾವಸ್ಥೆಯಲ್ಲಿ ಈ ರೀತಿಯ ಮನಸ್ಸಿನ ತಳಮಳ ಕಂಡುಬರುತ್ತದೆ. ಬಸವಣ್ಣನವರು, **'ಅಕಟಕಟಾ, ಶಿವ ನಿನಗಿನಿತು ಕರುಣೆಯಿಲ್ಲ, ಅಕಟಕಟಾ ಶಿವ ನಿನಗಿನಿತು ಕೃಪೆಯಿಲ್ಲ, ಏಕೆ ಹುಟ್ಟಿಸಿದೆ ಇಹಲೋಕದುಃಖಿಯ, ಪರಲೋಕದೂರನ? ಕೂಡಲಸಂಗಮದೇವಾ ಕೇಳಯ್ಯಾ, ಎನಗಾಗಿ ಮತ್ತೊಂದು ತರುಮರನಿದ್ದಿಲ್ಲವೇ?'** ಎಂದಿದ್ದಾರೆ. ಪರಮಾತ್ಮನನ್ನು ಒಲಿಸದೆ ಕೇವಲ ಸಾಂಸಾರಿಕ ಇತಿಮಿತಿಗಳೊಳಗೆ ಕಳೆಯುವ ಜನ್ಮ ವ್ಯರ್ಥ. ಅದಕ್ಕಿಂತ ಹುಟ್ಟದೇ ಇದ್ದಿದ್ದರೇ ಲೇಸಾಗುತ್ತಿತ್ತು ಎನ್ನುವ ಅಭಿಪ್ರಾಯ ಅವರದು. ಅದಕ್ಕಾಗಿ ಶಿವಕಾರುಣ್ಯವನ್ನು ಪಡೆಯಲೋಸುಗ ಹಗಲಿರುಳೂ ಹಂಬಲಿಸಿ ಮೊರೆ ಇಡುತ್ತಾರೆ. ಇಂತಹುದೇ ಒಂದು ಆಂತರಿಕ ತಳಮಳದ ಸ್ಥಿತಿಯನ್ನು ಇಲ್ಲಿ ಕಾಣಬಹುದು.

ಮೊದಲನೆಯದಾಗಿ ಶಿವಸ್ತುತಿ ಮತ್ತು ಆತನ ಕರುಣೆಗಾಗಿ ಹಂಬಲದ ಬೇಡಿಕೆಯನ್ನು ಶಿವಕಾರುಣ್ಯಸ್ಥಲದಲ್ಲಿ ಕಾಣುತ್ತೇವೆ. ಇಲ್ಲಿ ಬರುವ ಮೊದಲನೆಯ ಹಾಡು ಗುರುವಿನ ಉಪದೇಶದ ಮಹತ್ವವನ್ನು ಸಾರುತ್ತದೆ. ಅಧ್ಯಾತ್ಮಮಾರ್ಗದಲ್ಲಿ ಮುನ್ನಡೆಯ ಬೇಕಾದ ಸಾಧಕನಿಗೆ ಗುರು ಒಂದು ಊರುಗೋಲಿದ್ದಂತೆ. ಮಾರ್ಗದುದ್ದಕ್ಕೂ ಶಿಷ್ಯನನ್ನು ಎಚ್ಚರಿಸಿ, ಶಿವಮಾರ್ಗದಲ್ಲಿ ತಪ್ಪಿಲ್ಲದೆ ಹೆಜ್ಜೆ ಇಡುವಂತೆ ಗುರು ಪ್ರೇರೇಪಿಸುತ್ತಾನೆ, ಉಪದೇಶಿಸುತ್ತಾನೆ. 'ಕೈವಲ್ಯಪದ್ಧತಿ'ಯ ಉದ್ದಕ್ಕೂ ಗುರುವಿನ ಮಹತ್ವ ಎದ್ದು ತೋರುತ್ತದೆ. ಐದು ಸ್ಥಲಗಳಲ್ಲಿಯೂ ಮೊತ್ತಮೊದಲನೆಯ ಹಾಡುಗಳು ಗುರುಸ್ತುತಿಗಾಗಿ ಮೀಸಲು ಎಂಬುದು ಗಮನಾರ್ಹ.

ಶಿವಕಾರುಣ್ಯಸ್ಥಲದ ಮೊದಲನೆಯ ಹಾಡು ಗುರುವಿನ ಉಪದೇಶದ ಮಹತ್ವವನ್ನು ಸಾರುವುದರ ಜೊತೆಗೆ, ಇಡೀ ಗ್ರಂಥದಲ್ಲಿರುವ ಎಲ್ಲ ಹಾಡುಗಳ ವಿಚಾರಗಳನ್ನೂ ಸೂಚ್ಯವಾಗಿ ಎತ್ತಿ ತೋರಿಸುವಂತಿದೆ.

**ಶ್ರೀ ಗುರುವಚನೋಪದೇಶವನಾಲಿಸಿ**
**ದಾಗಳಹುದು ನರರಿಗೆ ಮುಕುತಿ ॥ಪ॥**

ಎಂದು ಪ್ರಾರಂಭವಾಗುವ ಗೀತೆಯಲ್ಲಿ ಮುಂದೆ ಬರುವ ಐದು ನುಡಿಗಳಲ್ಲಿ, ಸಾಧಕನ ಮುನ್ನಡೆಗೆ ಅವಶ್ಯವೆನಿಸುವ ವಿಚಾರಗಳು ಸದ್ಗುರುವಿನ ಉಪದೇಶಾಮೃತವಾಗಿ ಹರಿಯುತ್ತವೆ. ಆ ಎಲ್ಲ ಮಾತುಗಳನ್ನು ಆಲಿಸಿ ಮನನ ಮಾಡಿಕೊಂಡು ಪರಿಪಾಲಿಸಿದಾಗ ನರರಿಗೆ ಮುಕ್ತಿ ದೊರೆಯುವುದು. ಸಾಧಕನು ಪಾಪಕರ್ಮಗಳನ್ನು ಮಾಡದೆ, ಸಕಲ ಜೀವಿಗಳಿಗೂ ಕರುಣೆ ತೋರುತ್ತ 'ಹರನಡಿವಿಡಿ'ಯುವ ಸಮರ್ಪಣಾಭಕ್ತಿಭಾವವನ್ನು ಬೆಳೆಸಿಕೊಳ್ಳಬೇಕೆಂಬುದು ಮೊದಲನೆಯ ನುಡಿಯ ಉಪದೇಶ. ಎರಡನೆಯ ನುಡಿಯಲ್ಲಿ **'ನಿಂದಿಸಿ ನುಡಿಯದಿರಾರನು ಮನಸಿಗೆ ಬಂದಂತೆ ನಡೆಯದಿರಿಹದಲ್ಲಿ'** ಎಂದು ಜೀವವನ್ನು ಜಾಗೃತಗೊಳಿಸುವ ಎಚ್ಚರದ ನುಡಿಗಳು ಬಂದಿವೆ.

ಭವಮಾಲೆಯನ್ನು ಧಿಕ್ಕರಿಸಿ, ಸತ್ಯಧೈರ್ಯಗಳಿಂದ ಮುಂದುವರಿಯುವ ಸಾಧಕ, ಸಿರಿವಂತಿಕೆಯಲ್ಲಿ ಅಹಂಕಾರ ತೋರದೆ ವಿನಯಶಾಲಿಯಾಗಿದ್ದು, ನೈತಿಕ ನಿಷ್ಠೆಯ ಭದ್ರ ತಳಹದಿಯ ಮೇಲೆ ನಿಲ್ಲಬೇಕೆನ್ನುವ ಉಪದೇಶದ ಮಾತುಗಳನ್ನು ಮುಂದಿನ ನುಡಿಯಲ್ಲಿ ಕಾಣುತ್ತೇವೆ. ನಾಲ್ಕನೆಯ ನುಡಿಯಲ್ಲಿ, 'ಜಗತ್ತೆಲ್ಲವೂ ಪರಬ್ರಹ್ಮನ ಸ್ವರೂಪ' ಎಂಬ ಅದ್ವೈತ ತತ್ತ್ವವನ್ನು ಬಾಹ್ಯದಲ್ಲಿ ಬಳಸದೆ **'ನಿನ್ನೊಳಗೇಕೋಭಾವನೆಯೊಡಗೂಡು'** (ಏಕೋಭಾವನೆ = ಅದ್ವೈತ ಭಾವನೆ) ಎಂಬ ನಿಜಗುಣರ ಮಾತು ಬಹಳ ಮುಖ್ಯವಾದುದು. **'ತನ್ನಂತೆ ಪರರ ಬಗೆದಡೆ ...'** ಎಂಬಂತೆ ಎಲ್ಲರೂ ಶಿವನಂಶವೆ, ಆದ್ದರಿಂದ ಎಲ್ಲರೂ ಒಂದೇ ಎಂಬ ಅರಿವು ನಮ್ಮ ಅಂತರಂಗದಲ್ಲಿ ಇರಬೇಕು. ಅದನ್ನು ಹೊರಗಿನ ವ್ಯವಹಾರಗಳಿಗೂ ಬಳಸಹೋದರೆ ಅಪಾಯಕಾರಿ ಎನಿಸಬಹುದು. ಇಲ್ಲಿ ರಾಮಕೃಷ್ಣ ಪರಮಹಂಸರ 'ಆನೆ–ಬ್ರಹ್ಮ'ದ ದೃಷ್ಟಾಂತವನ್ನು ನೆನಪಿಸಿಕೊಳ್ಳಬಹುದು.

ಕೊನೆಯದಾದ ಐದನೆಯ ನುಡಿಯಲ್ಲಿ ತಾನಾರೆಂದು ತಿಳಿಯುವ ಬಗ್ಗೆ ನಿಜಗುಣರು ಹೀಗೆ ಎಚ್ಚರಿಸುತ್ತಾರೆ:

**ಆರು ನಾನೆಂದು ವಿಚಾರಿಸು ವಿಷಮ ಸಂ**
**ಸಾರವಿದನು ಕನಸೆಂದರಿ ।**
**ಮಾರಮರ್ದನ ಶಂಭುಲಿಂಗವನೊಲಿಸಿ ಗಂ**
**ಭೀರ ಸುಖದೊಳಿರೆಂದರುಹುವ ॥೫॥**

ಸಂಸಾರ ವಿಷಮತೆಯಿಂದ ಕೂಡಿದೆ. ಅದು ಶಾಶ್ವತವಾದ

ದ್ದಲ್ಲ, ಕನಸಿನಂತೆ ಅಳಿದುಹೋಗುವುದು. ಆದ್ದರಿಂದ ನಿತ್ಯದ ಲೌಕಿಕ ಜೀವನದಲ್ಲಿ ನಾವು ಕಾಣುವ, ಅನುಭವಿಸುವ ವಿಷಮತೆಯನ್ನು ಕಡೆಗಣಿಸಬೇಕು. ನಮ್ಮ ಗುರಿ ಯಾವಾಗಲೂ ಶಾಶ್ವತ ಸುಖ ನೀಡುವ, ಮಾರಮರ್ದನನಾದ ಶಂಭುಲಿಂಗವನ್ನು ಒಲಿಸಿಕೊಳ್ಳುವ ಕಡೆಗಿರಬೇಕು. ಹಾಗಾದಾಗ ಮಾತ್ರ ನಾವು ಅತ್ಯಂತ ಸುಖಿಗಳಾಗಬಲ್ಲೆವು. ಇದನ್ನೇ ನಿಜಗುಣರು ಗುರುವಿನ ಉಪದೇಶದ ಮೂಲಕ ಸಾಧಕರಿಗೆ ತಿಳಿಯಪಡಿಸುತ್ತಾರೆ.

ಹೀಗೆ ಕೈವಲ್ಯಪದ್ಧತಿಯಲ್ಲಿರುವ ಐದೂ ಸ್ಥಲಗಳ ಭಾವ ಮೊದಲನೆಯ ಈ ಹಾಡಿನಲ್ಲಿ ಸೂಕ್ಷ್ಮರೂಪದಲ್ಲಿ ಅಡಗಿರುವುದರಿಂದ ಇದು ಈ ಗ್ರಂಥಕ್ಕೆ 'ನಾಂದಿ'ಯಾಗಿದೆ, ಇಡೀ ಗ್ರಂಥದ ವಿಚಾರಗಳನ್ನು ದರ್ಶಿಸಬಲ್ಲ 'ಕನ್ನಡಿ'ಯಂತಿದೆ ಎಂಬುದು ವಿದ್ವಾಂಸರ ಅಭಿಪ್ರಾಯ.

ಶಿವಕಾರುಣ್ಯಸ್ಥಲದ ಮೊದಲಿನ ಕೆಲವು ಹಾಡುಗಳು ಶಿವಶಕ್ತಿಯರ ಸ್ತುತಿಗೆ ಮೀಸಲಾಗಿವೆ. ಇವುಗಳಲ್ಲಿ ನಿಜಗುಣರು ಶಿವನ ಲೀಲೆಯನ್ನು ಬಣ್ಣಿಸಿ, ಆ ಮೂಲಕ ಶಿವಸ್ತುತಿಗೈದಿದ್ದಾರೆ.

**ಹರನಾಮವನು ಬಿಡದೆ ಜಪಿಸಬಲ್ಲವರು ಭವ**
**ಮರಣ ಮಾಯಾ ಕರ್ಮಮಲ ಪಾಶಬಂಧ ಬಹು**
**ದುರಿತ ಸಂಸಾರ ಸಂತಾಪ ಸಂಚಯವಳಿದು**
**ವರಭೋಗ ಮೋಕ್ಷವಹುದು ॥**

ಎಂಬ ಹಾಡಿನಲ್ಲಿ ಶಿವನಾಮಸ್ಮರಣೆಯಿಂದ ಸಾಧಕನಿಗೆ ಉಂಟಾಗುವ ಲಾಭಗಳನ್ನು ತಿಳಿಸಿದ್ದಾರೆ. ಸತತವಾಗಿ ಮನಸ್ಸಿನಲ್ಲಿ ಪರಮಾತ್ಮನ ನಾಮಸ್ಮರಣೆ ಬೇರೂರಿದಾಗ, ಅಲ್ಲಿ ಹೊರಗಿನ ಅನ್ಯ ವಿಷಯಗಳಿಗೆ ಸ್ಥಳವಿಲ್ಲ. ನಾಮವು ಗಟ್ಟಿಯಾಗಿ ನೆಲೆ ನಿಂತಿತೆಂದರೆ ಶಿವನೇ ನೆಲೆಸಿದಂತೆ. ದೇವನೇ ಮನದಲ್ಲಿ ನೆಲೆಯಾಗಿ ನಿಂತು ರಕ್ಷಿಸುವಾಗ ಜನನ–ಮರಣ, ಮಾಯೆಯ ಕರ್ಮ, ಮೂರು ಮಲಗಳಿಂದ ಉಂಟಾಗುವ ಬಂಧನ ಮತ್ತು ಪಾಪಗಳಿಂದ ಕೂಡಿದ ಸಂಸಾರದ ಭಯವೆಲ್ಲಿ ? ಎಲ್ಲವೂ ದೂರಾಗಿ ಅಳಿದು ಹೋಗುವುವು. ಮಾನವ ಬರಬರುತ್ತಾ ಜೀವಭಾವವಳಿದು ಶಿವಭಾವ ತಳೆಯುವನು, ಮುಂದೆ ಮೋಕ್ಷ ಸಾಧಿಸಿಕೊಳ್ಳುವನು. ಆದ್ದರಿಂದ **'ಹರನಾಮವನು ಬಿಡದೆ ಜಪಿಸುವ'** ಮಹತ್ವವನ್ನು ಈ ಗೀತೆಯಲ್ಲಿ ಕಾಣಬಹುದು. **'ಪರಮೇಶ್ವರಿಯ ಪುಣ್ಯನಾಮ'**ವನ್ನೂ ಸ್ತುತಿಸಿ, ಸೃಷ್ಟಿಗೆ ಕಾರಣಕರ್ತರಾದ ಶಿವ–ಶಕ್ತಿ ಇಬ್ಬರ ಸ್ತೋತ್ರವನ್ನೂ ನಿಜಗುಣರು ಮಾಡಿದ್ದಾರೆ.

ಶಿವನಾಮ ಸ್ಮರಣೆ, ಶಿವಭಕ್ತಿಗಳಿಂದ ಸ್ತುತಿ ಮಾಡುತ್ತ ಮುಂದುವರಿದ ಸಾಧಕ ಶಿವನ ಕೃಪಾದೃಷ್ಟಿಗಾಗಿ ಹಂಬಲಿಸಿ ಮೊರೆಯಿಡುತ್ತಾನೆ; ಶಿವನು ತನ್ನ ಮೂರು ನೇತ್ರಗಳಿಂದ ದೃಷ್ಟಿಸಿ ನೋಡಿ, ತನ್ನ ಒಳಹೊರಗನ್ನು ಪವಿತ್ರಗೊಳಿಸಬೇಕೆಂದು ಬೇಡಿಕೊಳ್ಳುತ್ತಾನೆ. ಅತ್ಯಂತ ಸುಂದರ ಹಾಗೂ ಸರಳವಾಗಿ ಮೂಡಿಬಂದಿರುವ ಅಂತಹ ಒಂದು ಹಾಡನ್ನು ಇಲ್ಲಿ ನೋಡಬಹುದು.

**ನೋಡಲಾಗದೆ ದೇವ, ನೋಡಲಾಗದೆ**
**ಕೂಡೆ ನಿನ್ನ ದಿಟ್ಟಿ ಮೂರು ನೋಡೆ ಲೇಸು ಮಾಡಲೆನ್ನ**
**ನೋಡಲಾಗದೆ ದೇವಾ ನೋಡಲಾಗದೆ ॥ಪ॥**

**ಮಿಸುಕಲೀಯದೆನ್ನ ಮೋಹ**
**ವಿಸರವೆಂಬ ವನವನುರುಹಿ**
**ಭಸಿತವೆನಿಸೆ, ರುದ್ರ ನಿನ್ನ**
**ನೊಸಲ ವಹ್ನಿನೇತ್ರದಿಂದೆ ನೋಡಲಾಗದೆ ॥೧॥**
**ಕಲುಷತಿಮಿರ ಮುಸುಕಿ ಮುಗಿದು**
**ನಲಿಯದೆನ್ನ ಹೃದಯನಳಿನ ।**
**ವಲರೆ ದಿವ್ಯರೂಪ ನಿನ್ನ**
**ಬಲದ ಭಾನುನಯನದಿಂದೆ ನೋಡಲಾಗದೆ ॥೨॥**
**ಕರಣಕುಲ ಚಕೋರ ತಣಿಯೆ**
**ಹರುಷ ಶರಧಿ ಮೀರಲೆನ್ನ ।**
**ವರದ ಶಂಭುಲಿಂಗ ವಾಮ**
**ದುರು ಸುಧಾಕರಾಕ್ಷಿಯಿಂದೆ ನೋಡಲಾಗದೆ ॥೩॥**

ಪೌರಾಣಿಕವಾಗಿ ಶಿವನನ್ನು ಮೂರು ಕಣ್ಣುಳ್ಳವನು, ಮುಕ್ಕಣ್ಣ ಎಂದಿರುವ ಭಾವವನ್ನೇ ಸಾಂಕೇತಿಕವಾಗಿ ಇಟ್ಟುಕೊಂಡು ಕವಿ ಇಲ್ಲಿ ಅದನ್ನು ತಾತ್ತ್ವಿಕವಾಗಿ ಪರಿವರ್ತಿಸಿದ್ದಾರೆ. ಸಾಧಕ ಹೀಗೆ ಬೇಡುತ್ತಾನೆ: "ಶಿವನೇ, ನಿನ್ನ ಹಣೆಗಣ್ಣಿನಲ್ಲಿರುವ ಅಗ್ನಿನೇತ್ರವನ್ನು ತೆರೆದು ನನ್ನನ್ನು ನೋಡು. ನಾನು ಮೋಹವೆಂಬ ಕಾಡಿನಲ್ಲಿ ಅತ್ತಿತ್ತ ಮಿಸುಕಲಾರದಷ್ಟು ಬಿಗಿಯಾಗಿ ಬಂಧಿಸಲ್ಪಟ್ಟಿದ್ದೇನೆ. ನಿನ್ನ ಹಣೆಗಣ್ಣ ಬೆಂಕಿ ಆ ವನವನ್ನು ಸುಟ್ಟು ಭಸ್ಮ ಮಾಡಲಿ, ಆ ದೃಷ್ಟಿಯನ್ನು ನನ್ನೆಡೆಗೆ ಹರಿಸು." ಹಣೆಗಣ್ಣಿನಲ್ಲಿ ಬೆಂಕಿಯಿದ್ದಂತೆ ಬಲಗಣ್ಣಿನಲ್ಲಿ ಸೂರ್ಯ, ಎಡಗಣ್ಣಿನಲ್ಲಿ ಚಂದ್ರ ಇದ್ದಾರೆ. "ನನ್ನ ಹೃದಯಕಮಲಕ್ಕೆ ರಾಗ ದ್ವೇಷಾದಿಗಳ ಕತ್ತಲೆಯ ಮುಸುಕು ಕವಿದಿದೆ. ನಿನ್ನ ಬಲದ ನೇತ್ರದಿಂದ ದೃಷ್ಟಿಸಿ ನೋಡಿ ಆ ಕತ್ತಲೆಯನ್ನು ಓಡಿಸಿ, ನಿನ್ನ ಬಲದ ಕಣ್ಣಿನ ಸೂರ್ಯಕಿರಣದ ಬೆಳಗಿನಲ್ಲಿ ನನ್ನ ಹೃದಯಕಮಲ ಅರಳುವಂತೆ ಮಾಡು" ಎಂದಿದ್ದಾರೆ ನಿಜಗುಣರು.

ಕೊನೆಯ ನುಡಿಯಲ್ಲಿ ಶಿವನ ಎಡಗಣ್ಣಿನ ದೃಷ್ಟಿಯನ್ನು ಬೇಡುತ್ತಾರೆ. "ನನ್ನ ಇಂದ್ರಿಯಗಳು ಪ್ರಾಪಂಚಿಕ ತಾಪದಿಂದ ಬೆಂದು ಹೋಗಿವೆ. ಚಕೋರಪಕ್ಷಿ ಹೇಗೆ ಬೆಳದಿಂಗಳನ್ನು ಹೀರಿ ತೃಪ್ತಿ ಪಡೆಯುವುದೋ ಹಾಗೆ, ನನ್ನ ಇಂದ್ರಿಯಗಳು ನಿನ್ನ ಕೃಪಾಕಿರಣಗಳಿಂದ ಬೆಳಗಿ ಸಂತೃಪ್ತಿಯಿಂದ ತಣಿಯಲಿ, ನಿನ್ನ ಎಡಭಾಗದ ಸುಧಾಕರಾಕ್ಷಿಯಿಂದ ತಂಪಾದ ಚಂದ್ರನ ಕಿರಣಗಳನ್ನು ನನ್ನೆಡೆಗೆ ಹರಿಸು" ಎಂದು ಕವಿ ಬೇಡಿಕೊಳ್ಳುತ್ತಾರೆ. ಹೀಗೆ ಶಿವನ ಸಂಪೂರ್ಣ ದೃಷ್ಟಿ ತಮ್ಮ ಮೇಲೆ ಬಿದ್ದು, ತಮ್ಮಂತರಂಗ ಮತ್ತು ಬಹಿರಂಗಗಳೆರಡನ್ನೂ ಪರಿಶುದ್ಧಗೊಳಿಸಲೆಂದು ಈ ಗೀತೆಯಲ್ಲಿ ನಿಜಗುಣರು ಹಾರೈಸಿದ್ದಾರೆ.

ಈ ರೀತಿಯ ಹಲವಾರು ಪದ್ಯಗಳು ಇಲ್ಲಿವೆ. ಒಟ್ಟಿನಲ್ಲಿ ಸಾಧಕ ತನಗೆ ಬರುವ ಸಂಕಟ ನೋವುಗಳನ್ನೆಲ್ಲ ಶಿವನ ಕರುಣೆಯಿಂದ ಪಾರಾಗಿ, ಶಿವನ ಕೃಪಾದೃಷ್ಟಿಗೆ ಪಾತ್ರನಾಗಬೇಕೆಂಬ ಹಂಬಲದ ಬೇಡಿಕೆ ಇಲ್ಲಿದೆ. ಇನ್ನೊಂದು ಗೀತೆಯಲ್ಲಿ, ಮನಸ್ಸನ್ನು ಒಂದು ಕೋಗಿಲೆಗೆ ಹೋಲಿಸಲಾಗಿದೆ. ಕೋಗಿಲೆಯ ಮರಿಯಾಗಿ ಹುಟ್ಟಿ, ಕಾಗೆಯ ಗೂಡಿನಲ್ಲಿ ಬೆಳೆಯುವ ಕೋಗಿಲೆಗೆ 'ಪರಪುಟ್ಟ'ನೆಂದು ಕರೆಯುವಂತೆ, ಶಿವನ ಭಾವದಿಂದ ಕೂಡಿರಬೇಕಾದ ಮನಸ್ಸಿನಲ್ಲಿ ಕಾಮಾದಿ ವಿಷಯಗಳನ್ನು ತುಂಬಿಕೊಂಡು ಲೌಕಿಕ